ಆಸ್ತಿಯನ್ನು ತಮ್ಮ ಹೆಸರಿಗೆ ಬರೆಸಿಕೊಂಡು ಚಿಕಿತ್ಸೆ ನೆಪದಲ್ಲಿ ವೃದ್ಧ ಪೋಷಕರನ್ನು ಆಸ್ಪತ್ರೆಯಲ್ಲಿ ಬಿಟ್ಟು ಮಕ್ಕಳು ನಾಪತ್ತೆಯಾಗುವ ಪ್ರಕರಣಗಳು ರಾಜ್ಯದಲ್ಲಿ ಹೆಚ್ಚುತ್ತಿವೆ. ಅಂತಹ ಪೋಷಕರು ತಮ್ಮ ಮಕ್ಕಳ ಪರವಾಗಿ ಮಾಡಿರುವ ವಿಲ್ ಅಥವಾ ಆಸ್ತಿ ವರ್ಗಾವಣೆಗಳನ್ನು ರದ್ದುಗೊಳಿಸಲು ಅಗತ್ಯ ಕ್ರಮ ತೆಗೆದುಕೊಳ್ಳಬೇಕು ಎಂದು ವೈದ್ಯಕೀಯ ಶಿಕ್ಷಣ ಸಚಿವರು ಹೇಳಿದ್ದು ಕೆಲ ತಿಂಗಳ ಹಿಂದೆ ರಾಜ್ಯದಲ್ಲಿ ಸುದ್ದಿ ಮಾಡಿತ್ತು.

ಆದರೆ ಕೂಡು ಕುಟುಂಬದಲ್ಲಿ ಪಿತ್ರಾರ್ಜಿತ ಆಸ್ತಿಯ ಹಂಚಿಕೆ ಅಥವಾ ವಿಭಜನೆ ವಿಷಯಕ್ಕೆ ಬಂದರೆ ಕುಟುಂಬದೊಳಗೆ ನಡೆಯುವ ಚಿತ್ರಣವೇ ವಿಭಿನ್ನವಾದದ್ದು. ಎಷ್ಟೋ ಬಾರಿ ಆಸ್ತಿಗಾಗಿ ಅಣ್ಣ ತಮ್ಮಂದಿರ ನಡುವೆಯೇ ಮನಸ್ತಾಪ ಏರ್ಪಟ್ಟು ಪರಿಸ್ಥಿತಿ ತೀರಾ ವಿಕೋಪಕ್ಕೆ ಹೋಗಿರುವ ಸಂದರ್ಭಗಳು ಕೂಡ ಅಲ್ಲಲ್ಲಿ ವರದಿಯಾಗುತ್ತಿವೆ.

ಇದು ಮನೆ ಮನೆ ಕಥೆ. ಹಿರಿಯರು ಮಕ್ಕಳಿಗಾಗಿ ಮಾಡಿದ ಆಸ್ತಿ ಪಾಲು ಕುರಿತು ಬಹುತೇಕ ಎಲ್ಲ ಮನೆಗಳಲ್ಲಿ ಒಂದಲ್ಲ ಒಂದು ರೀತಿಯ ತಹತಹ ಇದ್ದದ್ದೇ. ಇದನ್ನು ಒಂದು ರೀತಿಯಲ್ಲಿ 'ಆಧುನಿಕ ಮಹಾಭಾರತ' ಎಂದರೂ ತಪ್ಪಲ್ಲ. 'ಹುಟ್ಟುತ್ತಾ ಅಣ್ಣ ತಮ್ಮಂದಿರು; ಬೆಳೆಯುತ್ತಾ ದಾಯಾದಿಗಳು' ಎಂಬ ಗಾದೆ ಆಸ್ತಿ ವಿಭಜನೆ ವಿಷಯಕ್ಕೆ ಬಂದಾಗಲೇ ಹೆಚ್ಚು ಪ್ರಸ್ತುತ ಎನಿಸುತ್ತದೆ. ಹೆತ್ತವರು ತಮ್ಮ ಕಷ್ಟಗಳ ನಡುವೆಯೂ ಮಕ್ಕಳಿಗೆಂದು ಕಷ್ಟಪಟ್ಟು ತೋಟ, ಹೊಲ ಖರೀದಿಸಿ, ಅದನ್ನು ಸಾಗುವಳಿ ಮಾಡುತ್ತಾ ಬಂದಿರುತ್ತಾರೆ. ಆದರೆ ಮಕ್ಕಳು ಅದನ್ನು ತಮ್ಮ ಸ್ವಾರ್ಥಕ್ಕಾಗಿ ಬಳಸಿ, ತಮ್ಮ ತಮ್ಮಲ್ಲೇ ಭಿನ್ನಾಭಿಪ್ರಾಯ ಬೆಳೆಸಿಕೊಂಡು ಆಸ್ತಿಗಾಗಿ ವ್ಯಾಜ್ಯ ನಡೆಸಿ ಕೊನೆಗೆ ಕೋರ್ಟ್‌ವರೆಗೂ ಹೋಗುವಂಥ ಪರಿಸ್ಥಿತಿ ನಿರ್ಮಿಸಿಕೊಳ್ಳುತ್ತಾರೆ. ಇಂತಹ ನೂರಾರು ಉದಾಹರಣೆಗಳು ಇಂದು ನಮ್ಮ ಕಣ್ಣಮುಂದೆಯೇ ಸಿಗುತ್ತವೆ.

ಕೂಡು ಕುಟುಂಬದಲ್ಲಿ ನಾಲ್ಕೈದು ಮಂದಿ ಅಣ್ಣ ತಮ್ಮಂದಿರಿದ್ದು, ಕುಟುಂಬದ ಆಸ್ತಿಯಲ್ಲಿ ಬರುವ ಆದಾಯ ಮನೆಯ ಖರ್ಚಿಗೆ ಸಾಲದೇ ಬಂದಾಗ ತಮ್ಮಂದಿರು ಹೊರ ಊರಿಗೆ ಹೋಗಿ ದುಡಿದು ಸಂಪಾದನೆ ಮಾಡುತ್ತಾರೆ. ಹಲವು ವರ್ಷಗಳ ಕಾಲ ಮನೆಯಿಂದ ಹೊರಗೇ ಉಳಿದು ಹಬ್ಬಕ್ಕೋ ಇನ್ಯಾವ ಸಮಾರಂಭಕ್ಕೆ ಮಾತ್ರ ಮನೆಗೆ ಹೋಗಿ ಬರುವ ತಮ್ಮಂದಿರ ಅರಿವಿಗೇ ಬಾರದಂತೆ ಪಿತ್ರಾರ್ಜಿತ ಆಸ್ತಿಯನ್ನು ತಮ್ಮ ಹೆಸರಿಗೆ ಮಾಡಿಕೊಂಡಿರುವ ಅನೇಕ ಪ್ರಕರಣಗಳೂ ನಮ್ಮ ಮುಂದಿವೆ. ಹೆತ್ತವರು ಎಲ್ಲ ಮಕ್ಕಳಿಗಿರಲಿ ಎಂದು ಮಾಡಿಟ್ಟ ಆಸ್ತಿಯಲ್ಲಿ ತಮ್ಮ ಪಾಲನ್ನು ಕೊಡಲು ಕೇಳಿದಾಗ ಅವರನ್ನು ಬೈದು ಆಚೆ ಕಳಿಸುವ ಅಥವಾ ಇನ್ಯಾವುದೋ ರೀತಿಯಲ್ಲಿ ತಮ್ಮಂದಿರನ್ನು ದೂರ ತಳ್ಳುವ ಕೆಲಸವನ್ನೂ ಕುಟುಂಬದ ಹಿರಿಯ ಸದಸ್ಯರು ಮಾಡುತ್ತಿರುವುದು ಕೂಡ ಈಗ ನಡೆಯುವ ವಾಸ್ತವ ವಿದ್ಯಮಾನವೇ ಆಗಿದೆ



**ಒಬ್ಬ ಕರ್ತೃ ತನ್ನ ಹೆಸರಲ್ಲಿರುವ ಒಟ್ಟು ಕುಟುಂಬದ ಆಸ್ತಿಯ ನೆಪದಲ್ಲಿ ಇತರ ಕಾನೂನುಬದ್ಧ ವಾರಸುದಾರರಿಗೆ ಕಿರುಕುಳ ಎಸಗಿದರೆ ಆ ವಾರಸುದಾರರು ನ್ಯಾಯಾಲಯದಲ್ಲಿ ಆಸ್ತಿ ವಿಭಾಗಕ್ಕೆ ದಾವೆ ಹೂಡಿ ನ್ಯಾಯವನ್ನು ದೊರಕಿಸಿಕೊಳ್ಳಬಹುದು**

